RegaNo BG 155

— ಶ್ರೀ —

23—2—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಪೌರಸಭೆ

ಈ ಸೂಹೆ 28 ರಂದು ವಧ್ಯಾಹ್ನ 4 ಗಂಟೆಗೆ ವೈಸೂರು ಪೌರಸಭೆಯ ಸಾ ವಾನ್ಯ ಸಭೆ ಸೇರುವದು.

ಸಾವಿನ ಸಂಖೆ ಏರಿಕೆ

ಹ್ಯಾಂಬರ್ಗಿನಲ್ಲಿ ಪ್ರವಾಹದ ದೆಸೆಯಿಂದ ಸತ್ತವರ ಸಂಖ್ಯೆ 272 ಕ್ಕೇರಿತು

ಸೊಕಾರ್ನೊ ಕರೆ

ಪಶ್ಚಿಮ ಇರಿಯನ್ ಪ್ರಶ್ನೆಯನ್ನು ಕುರಿತು ಮಾತುಕತೆ ಆರಂಭಿಸಬೇಕೆಂದು ಇಂಡೋನೇಷಿಯಾ ಅಧ್ಯಕ್ಷ ಡಾ|| ಸು ಕಾರ್ನೊ ಡಚ್ ಸರ್ಕಾರಕ್ಕೆ ತಿಳಿಸಿರುವ ರೆಂದು ಜಕಾರ್ತಾ ವಾರ್ತೆ.

ವೇತನ ಹೆಚ್ಚಿತು

ತಮಕೂರಿನಲ್ಲೂ ಕಸಗುಡಿಸುವವರ ವೇತನ ಹೆಚ್ಚಿದೆ.

೦೦

ಶಿವಮೊಗ್ಗಾದ ಕಸ ಗುಡಿಸುವವರಿಗೆ ವೇತನ ಹೆಚ್ಚಿತು. ಅವರಿಗೆ ನಿವೇಶನ ಕೂಡ ಸಿಕ್ಕಿತು. ವೇತನ ಏರಿಕೆ ಜನವರಿಯಿಂದ ಜಾರಿಗೆ ಬಂತೆದೆ

ಗಾಜಾಜಿ ಹೇಳಿಕೆ

ಸಾರ್ವತ್ರಿಕ ಚುನಾವಣೆಯಲ್ಲಿ ಆಡಳಿತ ಪಕ್ಷ ಕಾಂಗ್ರೆಸಿಗೆ ಬಲವಾದ ವಿರೋಧಪಕ್ಷವಾಗಿ ತನ್ನ ಪಕ್ಷ ಬಂಬವೆಂದು ಸ್ವತಂತ್ರ ಪಾರ್ಟಿ ನಾಯಕ ಶ್ರೀ ರಾಜಾಜಿ ಮೊನ್ನೆ ಕೊಯಮ್ಮತ್ತೂರಿನಲ್ಲಿ ತಿಳಿಸಿದರು ಯೋಜನೆ ಎಂದರೆ ಬಡವರಿಗೆ ಹೆಚ್ಚು ತೆರಿಗೆ ವಿಧಿಸುವದು ಎಂದು ಅವರು ನುಡಿದರು

ಅಪಾಯಕರ

ಪಂಜಾಬಿನ ಭಾದಾಸಿನಲ್ಲಿ ಪಂ|| ನೆಹರು ಮಾತನಾಡಿ ಕೋಮುವಾರು ಪಾರ್ಟಿಗಳು ದೇಶದ ಸಂಘಟನೆಗೆ ಅಪಾಯ ಎಂದರು

ಮತ್ತೆ ಆಕ್ರಮಣ

ಮದ್ರಾಸಿನಲ್ಲಿ ಮೊನ್ನೆ ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಹೇಳಿಕೆಯು ನ್ನಿತ್ತು, ಭಾರತ ಪ್ರದೇಶದ ಆಕ್ರಮಣವನ್ನು ಚೀನೀಯರು ಮುತ್ತ ಮುಂದುವರಿಸಿದಂತೆ ಕಾಣುತ್ತದೆ, ಭಾರತ ಪ್ರದೇಶದಲ್ಲಿ ಭಾರತ ವಿವಾನಗಳು ಎಸೆದ ವಸ್ತುಗಳೆಲ್ಲವನ್ನು ಚೀನೀಯರು ತೆಗೆದುಕೊಂಡಿರುವರು ಎಂದರು

ಗೋವಾ ಭವಿಷ್ಯ

ಗೋವಾ ಭವಿಷ್ಯ ಚುನಾವಣೆಯ ನಂತರ ಪರಿಶೀಲನೆ ಆಗುವದೆಂದು ಎಲಿಟರಿ ಗವರ್ನರಂತಾದ ಕ್ಯಾಂಡೆತರು ಪಂಜಿನುದಲ್ಲಿ ತಿಳಿಸಿದ್ದಾರೆ.

ಸಿಡಿತ

ಮೊನ್ನೆ ಮಧ್ಯಾಹ್ನ ನವ ದೆಹಲಿಯಾ ಜವು ಮಸೀದಿ ಪ್ರದೇಶದ ಒಂದು ಮನೆಯಲ್ಲಿ ಭಾರಿ ಆಸ್ಫೋಟನೆ ನಡೆಯಿತು ಪೋಲೀಸರ ಪ್ರಕಾರ ಅದು ನಾಡ ಸಿಡಿವದ್ದಿಂದ ಆದುದು 40 ಜನರನ್ನು ಪೋಲೀಸರು ಪ್ರಶ್ನಿಸಿದರು ಏನೆಂಬುದು ಗೊತ್ತಾಗಿಲ್ಲ

ಬೆಂಕಿ ಸ್ಪರ್ಶ

ಬೊಂಬಾಯಿನ ಮಾನ್ಬರ್ಡ ಅನಾಥ ಕಾಲನಿಯಲ್ಲಿ ಇದ್ದ ಕೃಪಾಲಿನಿ ಚುನಾವಣಾ ಪ್ರಚಾರ ಸಮಿತಿಗೆ ಬೆಂಕಿ ಹಚ್ಚಲಾಯಿತೆಂದು ವರದಿಯಾಗಿದೆ. ಒಳಗಡೆ ಮಲಗಿದ್ದ ಮಹಾವರು ಸಕಾಲದಲ್ಲಿ ಹೊರಗಡೆಗೆ ಓಡಿದರು

ಚುನಾವಣೆ ಸ್ಟಂಟ್

ಸ್ವತಂತ್ರವಾಗಿ ಸ್ಪರ್ಧಿಸುವ ಬಾಬು ಬರ್ಜಸಿಂಗರು ಪತ್ರಿಯಿಲ್ಲದಿರುವದು ರಾಜಕೀಯ ಸ್ಟಂಟು ಎಂದು ಲೂಧಿಯಾನಾ ಜಿಲ್ಲಾ ಮ್ಯಾಜಿಸ್ಟ್ರೇಟರು ಇತ್ತಿರುವ ಹೇಳಿಕೆಯಲ್ಲಿ ತಿಳಿಸಿರುವರು

ಸಂಪರ್ಕ ಇರುವುದು

ನ್ಯೂ ಏಜ್‌ನ ಈ ವಾರದ 18 ನೆಯ ತಾ| ಪತ್ರಿಕೆಯಲ್ಲಿ ಕಮ್ಯೂನಿಸ್ಟ ನಾಯಕರಾದ ಶ್ರೀ ಪಿ ಸಿ ಜೋಷಿಯವರು ಲೇಖನ ಬರೆದು ಚುನಾವಣೆಯ ನಂತರ ಕೂಡ ಕಮ್ಯೂನಿಸ್ಟ ಪಕ್ಷ ರಕ್ಷಣಾ ಮಂತ್ರಿ ಶ್ರೀ ವಿ ಕೆ ಮೆನನ್‌ರೊಡನೆ ಸಂಪರ್ಕವನ್ನು ಹೊಂದಿರುವದು ಎಂದು ತಿಳಿಸಿರುವರು ಟೀಕಿಸುವವರ ಪ್ರಕಾರ ಕಮ್ಯೂನಿಸ್ಟ ಪಕ್ಷ ಕೃಷ್ಣಮೆನನ್‌ರಿಗೆ ಬೆಂಬಲಿಸಿದಾಗ್ಯೂ ಅಡಳಿತ ಪಕ್ಷದ ಘನತೆಯನ್ನು ಇಳಿಸುವ ಪ್ರತಿಯೊಂದು ಕಾರ್ಯವನ್ನು ಕಮ್ಯೂನಿಸ್ಟ ಪಕ್ಷ ಮಾಡುವುದೆಂಬುದಾಗಿದೆ

2 ನೇ ಬಾರಿ ಫಾಸಿ

ಪಿಟೋರಿಯಾದಲ್ಲಿ ಮೊನ್ನೆ 27 ವರ್ಷದ ಡಂಕ್ಯ ಡೊನಾಲ್ಡ್ ಮುಡಿ ಎಂಬವನಿಗೆ ಅವನ ಮುಂಗೆಯ ವಿಚಾರಣೆ ಆದನಂತರ ಎಂಡನೆಯ ಬಾರಿ ಮರಣ ದಂಡನೆಗೆ ಗುರಿಮಾಡಲಾಯಿತು. 1960 ರ ಆಗಸ್ಟ 21 ರಲ್ಲಿ ಅವನು ತನ್ನ ಪತ್ನಿಯನ್ನು ಕೊಂದುದಕ್ಕೆ ಕಳೆದ ಏಪ್ರಿಲಿನಲ್ಲಿ ಕ್ವೆಕ್‌ಸ್ಟಡಾರ್ಪಿನಲ್ಲಿ ಮೊದಲನೆ ಬಾರಿ ಮರಣ ದಂಡನೆ ವಿಧಿಸಿತು. ಕಳೆದ ವರ್ಷ ಸೆಪ್ಟೆಂಬರ್ 29 ರಂದು ಅವನು ಸಲ್ಲಿಸಿದ ಅಪೀಲು ಗೆದ್ದಿತು. ಕಾರಣವೆಂದರೆ ಡೆಪ್ಯೆ ಪರೀಫರು ಜ್ಯೂರಿಯು ರೂಂನಲ್ಲಿದ್ದರು.

೦೦

ಚಂಡೀಘರದಿಂದ ಬಂದಿರುವ ವರದಿ ಪ್ರಕಾರ, ಚಂಡೀಘರ ಕ್ಷೇತ್ರದ ಜನ ಸಂಘದ ಉಮೇದುವಾರ ಶ್ರೀ ರಾಮ ಮೂರ್ತಿ ಪತ್ರೆ ಇಲ್ಲವೆಂದು ಅವರ ಪತ್ನಿ ಪೋಲೀಸರಿಗೆ ದೂರು ಕೊಟ್ಟಿದ್ದಾರೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಶ್ಯಾಸ್ಥಾನ ಜೋಯಿಸರಿಂದ

24 ಸಂಚಮಿ ಚಿತ್ತ

ಪಾಕಿಸ್ತಾನಕ್ಕೆ ತೊಂದರೆ ಕೊಡಲಂತೆ !

ಮೊನ್ನೆ ಲಾಹೋರಿನಲ್ಲಿ ಪಾಕಿಸ್ತಾನದ ವಿದ್ಯುತ್ ಮಂತ್ರಿ ಜಡ್ ಎ. ಭುಟ್ಟೋರವರು, ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡುತ್ತಾ, ಪಾಕಿಸ್ತಾನ ವಿರುದ್ಧ ಆರ್ಥಿಕ ಆಕ್ರಮಣ ಮಾಡಲು ಗೋವಾದ ಮೇಲಿನ ಭಾರತದ ಆಕ್ರಮಣದ ಗುರಿ ಎಂದು ನುಡಿದರು. ಸಭೆಯಲ್ಲಿ ವಿದ್ಯಾರ್ಥಿಗಳ ಗಲಭೆ ನಡೆಯುತ್ತಿತ್ತು.

ಚೀನೀಯರು ಬಿಟ್ಟೋಗಬೇಕು

ಭಾರತ ಭೂಮಿಯಿಂದ ಚೀನೀಯರನ್ನು ಹೊರದೂಡಬೇಕೆಂದು ಜನರು ಕೇಳುವರು. ಯಾವಾಗ ಓಡಿಸಬೇಕೆಂಬದನ್ನು ನಾನು ಹೇಳಲಾರೆ — ಆದರೆ ಒಂದು ವಿಷಯ ಖಂಡಿತ ಚೀನೀಯರು ಹೋಗಲೇಬೇಕು ಎಂದು ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್‌ರವರು ಮೊನ್ನೆ ಅಕೋಲಾದಲ್ಲಿ ತಿಳಿಸಿದರು.

೦೦

ಬಾಂಗಕಾಕಿನಲ್ಲಿ ಮೊನ್ನೆ ಆದ ಬೆಂಕಿ ಅನಾಹುತದಲ್ಲಿ 8 ಮಕ್ಕಳು ಸಜೀವ ದಹನ ಆದವು. 10 ಸಾವಿರ ಜನರಿಗೆ ಮನೆ ಇಲ್ಲವಾಗಿದೆ. ಬೆಂಕಿ 4 ಗಂಟೆಗಳವರಿಗೆ ಉರಿಯಿತು ಬೆಂಕಿ ಆರಿಸುವದರಲ್ಲಿ ಮೂವರು ಬೆಸ್ತರು ಗಾಯಗೊಂಡಿರುವರು.

ರಾಪಲ್ಲಿಯಿಂದ ವಾರ್ತೆ ಬಂದಿದೆ. ಪಾಟ್ಟಿಪ್ರೋಲು ನಿವಾಸಿ 80 ವರ್ಷದ ಶ್ರೀರಾವಲು ಎಂಬವರು ಮೊನ್ನೆ ದಿನ ಬೆಳಿಗ್ಗೆ 8 ವರೆ ಗಂಟೆಗೆ ಓಟು ಮಾಡಿ ರಿಕ್ಷಾ ಹತ್ತುತ್ತಿದ್ದಾಗ ಮರಣಹೊಂದಿದರು.

ಅಡೋನಿಯಲ್ಲಿ ಮೊನ್ನೆ ಕಾಂಗ್ರೆಸಿಗರು ಮತ್ತು ಸ್ವತಂತ್ರ ಉಮೇದುವಾರರುಗಳ ಬೆಂಬಲಿಗರಲ್ಲಿ ಹೊಡೆದಾಟವಾಗಿ 15 ಮಂದಿ ಗಾಯಗೊಂಡರು.

ನೆಹರೂ ಓಟು ಮಾಡಿವುದು

ಪಂ|| ನೆಹರು ಅಲಹಾಬಾದಿಗೆ ತಾ|| 25 ರಂದು ಬಂದು ಓಟುಮಾಡಿ ಸಂಜೆ ದೆಹಲಿಗೆ ವಾಪಸ್ಸಹೋಗುವರು

ಕಾಂಗ್ರೆಸ್ಸಿನಿಂದ ಸಸ್ಪೆಂಡ್ !

ಅಂಬೀಕೆರೆ ಅಸೆಂಬ್ಲಿ ಕ್ಷೇತ್ರದಲ್ಲಿ ಕಾಂಗ್ರೆಸು ವಿರುದ್ಧ ಚಟುವಟಿಕೆ ನಡೆಸಿದ ಮೂರು ಮಂದಿ ಸಸ್ಪೆಂಡು ಮಾಡಲ್ಪಟ್ಟಿರುವರು.

ಕಾರ್ಮಿಕೆಲ್ತು ಬಿಡಲು ಕೇಳಿಕೆ

ಕಂಠಾಚಿ 20— ಬ್ರಿಟಸ್ಸಿನಲ್ಲಿ ಪಾಕಿಸ್ತಾನ ರಾಷ್ಟ್ರೀಯರ ವೀಲಿನ ದುಂಡಾವರ್ತಿ ಉಪಾಧನೆಗಾಗಿ ಪಾಕಿಸ್ತಾನಿ ಪತ್ರಿಕೆಗಳಿನ ದ್ವೇಷಚಳವಳಿಖಂಡಿಸಿ ಪಾಕಿಸ್ತಾನದ ವಸಾಜಿ ಅಟರ್ನಿ ಜನರಲ್ ಚೌಧುರಿ ನಾಜೀರ ಅಹಮದರು ಪಾಕಿಸ್ತಾನವು ಕಾರ್ಮಿಕೆಲ್ತನ್ನು ಬಿಡಲು ಕೇಳಿಕೆ ಇತ್ತಿದ್ದಾರೆ.

ಬಹಿರಂಗ ಸಭೆ

ತಾ || 23 ರಂದು ಸಂಜೆ 6-30 ಕ್ಕೆ ಸ್ವತಂತ್ರ ಪಕ್ಷದ ಆಶ್ರಯದಲ್ಲಿ ಸುಬ್ಬರಾಯನ ಕೆರೆ ವೈದಾನದಲ್ಲಿ ಬಹಿರಂಗ ಸಭೆ ; ಪ್ರೊ|| ಎ ಟಿ ತಿರುನಾರಾಯಣಯ್ಯಂಗಾರ್ ಅಧ್ಯಕ್ಷತೆ ವಹಿಸುವರು ; ಶ್ರೀಗಳಾದ ಹೆಚ್. ನಿಂಜನರಾಜ ಅರಸ್, ಗೋಪಾಲಕೃಷ್ಣ ಅಡಿಗ, ಟಿ ಪಿ ಕೋದಂಡರಾಮಯ್ಯಿಲ್ಲಿ ಭಾಷಣಮಾಡುವರು.

ಓಟುದಾರರಲ್ಲಿ ಮನವಿ

ಚಾಮರಾಜ ಮೊಹಲ್ಲಾ ತೆರಿಗೆದಾರರ ಸಂಘದ ಕಾರ್ಯಕಾರಿ ಸಮಿತಿಯು ಇಂದಿನ ಸಭೆ ತಾ || 21 ರಲ್ಲಿ ಸಂಘದ ಅಧ್ಯಕ್ಷರಾದ ಡಾ || ಎಂ ನರಸಿಂಹಯ್ಯ ಪಂಡಿತ್‌ವರ ಅಧ್ಯಕ್ಷತೆಯಲ್ಲಿ ಸೇರಿ, ಈ ಕೆಳಗೆ ಕಂಡ ನಿರ್ಣಯವನ್ನು ಅಂಗೀಕರಿಸಿತು:—

ತಾ|| 25 ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಮಾನ್ಯ ಓಟುದಾರರು ರಾಷ್ಟ್ರೀಯ ಪಕ್ಷಕ್ಕೆ ಓಟುಮಾಡಬೇಕೆಂದು ಈ ಸಭೆ ವಿನಂತಿಸುತ್ತದೆ : ಯಾವ ರಾಷ್ಟ್ರೀಯ ಪಕ್ಷ ಪ್ರಜೆಗಳಿಗೆ ಸ್ವಾತಂತ್ರ್ಯ ಸೌಖ್ಯ, ಅಕ್ಕಿ ರಾಗಿ ಮುಂತಾದ ಧಾನ್ಯಗಳ ಬೆಲೆ ಇಳಿತವು, ಕಂದಾಯ ಹೊರೆ ಕಡಮೆ ಮಾಡುವುದು, ಇವನ್ನು ಮಾಡುವುದೋ ಅಂಥ ಪಕ್ಷಕ್ಕೇ ಓಟು ಕೊಡಬೇಕೆಂದು ಓಟು ಕೊಡಬೇಕೆಂದು ಓಟುದಾರರಲ್ಲಿ ವಿನಂತಿಸಲಾಗಿದೆ

✱

ವಿನೋದ

ಅಮೇರಿಕಾದ ಎನೋದಿ ಒಲಿವರ್ ಹೆಫ್ಲೋರ್ಡನು ಒಂದು ಸಾಯಂಕಾಲ ಕಿಕ್ಕಿರಿದು ತುಂಬಿದ ರೈಲುಬಂಡಿಯೊಳಗೆ, ತನ್ನ ತೊಡೆಗಳ ಮೇಲೆ ತನ್ನ ಚಿಕ್ಕ ಭಾತ್ರೀಯನ್ನನ್ನು ಕುಳ್ಳಿರಿಸಿಕೊಂಡು ಪ್ರಯಾಣ ಮಾಡುತ್ತಿದ್ದನು ; ಹೊಂಬಣ್ಣದ ಕೇಶರಾಶಿಯ ಸುಂದರ ಯುವತಿಯೋರ್ವಳು ಒಂದು ಕಡೆ ಆ ಗಾಡಿಯನ್ನೇರಿ, ಅವನು ಕುಳಿತ ಎದುರಲ್ಲೇ, ಮೇಲಿಂದ ಜೋಲಾಡುವ ಪರ್ಸಿನ ಪಟ್ಟಿಗೆ ಕೈ ಕೊಟ್ಟು ನಿಂತಳು (ಕುಳಿತುಕೊಳ್ಳಲು ಸ್ಥಳವಿಲ್ಲದಷ್ಟು ಜನ ತುಂಬಿತ್ತು)

ಹೆಫ್ಲೊರ್ಡನು ಅವಳನ್ನು ನಗುಮೊಗದಿಂದ ದಿಟ್ಟಿಸುತ್ತ, ತನ್ನ ಭಾತ್ರೀಯನನ್ನು ಮೊಣಕೈಯಿಂದ ಮೆತ್ತಗೆ ಕುಟ್ಟುತ್ತಾ ಹೇಳಿದನು— 'ಮಗೂ ನೀನು ಎದ್ದು, ನಿನ್ನ ಜಾಗವನ್ನು ಆ ಮಹಿಳೆಗೇಕೆ ಕೊಡುವುದಿಲ್ಲ !'

ಆಪೆರಾ — 23-2-62 ರಿಂದ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ಕೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

Our Bangalore Sales Depot address—
71 / 4, Arcot Sreenivasachar St., Bangalore 2.

ವುಡ್‌ಲಾಂಡ್ಸ್ ಜನಪ್ರಿಯ 3 ನೇ ವಾರ

.... ಸಹಸ್ರಗಟ್ಟಲೆ ಜನರು ನೋಡಿ ಆನಂದಿಸುತ್ತಿರುವ ಅಪೂರ್ವ ಚಿತ್ರಪ್ರಸ್ತ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭಾ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ

ನಕ್ಷತ್ರದ ಮುಂದೆ X ಹೀಗೆ ಸೀಲ್ ಹಾಕಿ

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲಾ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನುಳ್ಳ

ಎಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press, Chamarajapuram, Mysore 4.